
# ನಿಷ್ಠೋಡನೆ

## ‘ಜಿಲ್ಲಾಸ್ಪತ್ರೆಗಳಲ್ಲಿ ಕಿಮೋಥೆರಪಿ’ ಮಾದರಿ ಹೆಜ್ಜೆ ‘ಆರೋಗ್ಯ ಗ್ಯಾರಂಟಿ’ ನಿರೀಕ್ಷೆಯಲ್ಲಿ ಶ್ರೀಸಾಮಾನ್ಯ

ಚಿಕಿತ್ಸೆಗಾಗಿ ಬಡಜನರು ನೂರಾರು ಮೈಲಿ ಪ್ರಯಾಣಿಸಬೇಕೆನ್ನುವುದು ಯಾವುದೇ ನಾಗರಿಕ ವ್ಯವಸ್ಥೆಗೆ ಶೋಭೆ ತರುವಂತಹ ಸಂಗತಿಯಲ್ಲ. ಜನರಿಗೆ ಇದ್ದಲ್ಲಿ ಇಲ್ಲವೇ ಸಮೀಪದ ಸ್ಥಳದಲ್ಲಿ ಉತ್ತಮ ಚಿಕಿತ್ಸೆ ದೊರೆಯುವುದು ಅವಶ್ಯಕ. ಕರ್ನಾಟಕ ಸರ್ಕಾರ ‘ಆರೋಗ್ಯ ಗ್ಯಾರಂಟಿ’ ಒದಗಿಸಬೇಕಾಗಿದೆ.



ಈಶ್ವರ್

ಮನುಷ್ಯನ ಅಸಹಾಯಕತೆ ಹಾಗೂ ಸಂಕಟದ ಆತ್ಯಂತಿಕ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಗಳು ಜ್ಞಾನೋದಯದ ಕೇಂದ್ರಗಳೇ ಸರಿ. ಜಿಲ್ಲಾ ಕೇಂದ್ರಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಿಗೆ ಹೋದರೆ, ಜನಸಾಮಾನ್ಯರ ನೋವು ನಿಟ್ಟುಸಿರು ಅನುಭವಕ್ಕೆ ಬರುವಂತಿರುತ್ತದೆ. ನಿಮ್ಹಾನ್ಸ್, ಕಿದ್ವಾಯಿಯಂಥ ಆಸ್ಪತ್ರೆಗಳಂತೂ ದೇಶದ ಜನಸಾಮಾನ್ಯರ ಬದುಕಿಗೆ ಹಿಡಿದಿರುವ ಕನ್ನಡಿಯಂತೆ ಕಾಣಿಸುತ್ತವೆ. ನಾಡಿನ ವಿವಿಧ ಭಾಗಗಳಿಂದ ಗುಣಮುಖರಾಗುವ ಆಸೆಯಿಂದ ರಾಜಧಾನಿಯ ಸರ್ಕಾರಿ ಆಸ್ಪತ್ರೆಗಳಿಗೆ ಧಾವಿಸುವ ಜನರು, ಚಿಕಿತ್ಸೆ ಪಡೆಯಲು ಹೋರಾಟವನ್ನೇ ನಡೆಸಬೇಕಾಗುತ್ತದೆ. ಸಂಪನ್ಮೂಲಗಳು, ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯ ಕೊರತೆಯ ಜೊತೆಗೆ ಭ್ರಷ್ಟಾಚಾರವೂ ಸೇರಿಕೊಂಡು ಆಸ್ಪತ್ರೆಗೆ ಬರುವ ರೋಗಿಗಳನ್ನು ಹಾಗೂ ಅವರ ಒಡನಾಡಿಗಳನ್ನು ಹಣ್ಣು ಮಾಡಿಬಿಡುತ್ತವೆ. ಆ ಕಾರಣದಿಂದಲೇ ಆಸ್ಪತ್ರೆಗಳು ಕೆಲವೊಮ್ಮೆ ನರಕದ ಮಿನಿಯೇಚರ್‌ಗಳಂತೆ ಕಾಣಿಸುತ್ತವೆ.

ನಿಮ್ಹಾನ್ಸ್, ಕಿದ್ವಾಯಿಗಳಂಥ ಆಸ್ಪತ್ರೆಗಳು ತಜ್ಞ ವೈದ್ಯರು ಹಾಗೂ ಉತ್ತಮ ಸೌಕರ್ಯಗಳ ಕಾರಣದಿಂದಾಗಿ ದೇಶದಲ್ಲೇ ಹೆಸರು ಮಾಡಿವೆ. ಆದರೆ, ರೋಗಿಗಳ ದೊಡ್ಡ ಸಂಖ್ಯೆಯೆದುರು ಈ ಆಸ್ಪತ್ರೆಗಳ ಧಾರಣಾಶಕ್ತಿ ತೀರಾ ಕಡಿಮೆ. ನೂರಾರು ಮೈಲಿಗಳಿಂದ ಬರುವ ಬಡ ರೋಗಿಗಳು ಒಳರೋಗಿಗಳಾಗಿ ಚಿಕಿತ್ಸೆ ಪಡೆಯಲು ಹರಸಾಹಸ ಪಡಬೇಕಾಗುತ್ತದೆ. ದೊಡ್ಡ ಸಂಖ್ಯೆಯ ರೋಗಿಗಳನ್ನು ನಿಭಾಯಿಸುವಲ್ಲಿ ವೈದ್ಯರು ಕೂಡ ಕೆಲವೊಮ್ಮೆ ಅಸಹಾಯಕರಾಗಬೇಕಾಗುತ್ತದೆ.

ಚಿಕಿತ್ಸೆಗಾಗಿ ಬಡಜನರು ನೂರಾರು ಮೈಲಿ ಪ್ರಯಾಣಿಸಬೇಕೆನ್ನುವುದು ಯಾವುದೇ ನಾಗರಿಕ ವ್ಯವಸ್ಥೆಗೆ ಶೋಭೆ ತರುವಂತಹ ಸಂಗತಿಯಲ್ಲ. ಜನರಿದ್ದಲ್ಲಿ ಇಲ್ಲವೇ ಸಮೀಪದ ಸ್ಥಳದಲ್ಲಿ ಉತ್ತಮ ಚಿಕಿತ್ಸೆ ದೊರೆಯುವುದು ಅವಶ್ಯಕ. ಹೀಗೆ ಚಿಕಿತ್ಸೆ ದೊರೆಯುವುದಕ್ಕಾಗಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ನಿಮ್ಹಾನ್ಸ್, ಕಿದ್ವಾಯಿ ಹಾಗೂ ಜಯದೇವ ಆಸ್ಪತ್ರೆಗಳ ಶಾಖೆಗಳು ಆರಂಭಗೊಳ್ಳಬೇಕು. ಅಪಾರ ಸಂಪನ್ಮೂಲ ಹಾಗೂ ಶ್ರಮವನ್ನು ಬಯಸುವ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರಕ್ಕೆ ಸಂಕಲ್ಪಶಕ್ತಿ ಅಗತ್ಯ.

ಪ್ರಸ್ತುತ ಕ್ಯಾನ್ಸರ್ ರೋಗಿಗಳ ಅನುಕೂಲಕ್ಕಾಗಿ 16 ಜಿಲ್ಲಾ ಆಸ್ಪತ್ರೆಗಳಲ್ಲಿ ‘ಡೇ ಕೇರ್ ಕಿಮೋಥೆರಪಿ’ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಈ ಯೋಜನೆಯ ಭಾಗವಾಗಿ ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಕಿಮೋಥೆರಪಿ ಕೇಂದ್ರಕ್ಕೆ ಇತ್ತೀಚೆಗಷ್ಟೇ ಚಾಲನೆ ದೊರೆತಿದೆ. ವಿಜಯಪುರ, ಉಡುಪಿ, ಬಳ್ಳಾರಿ, ಧಾರವಾಡ, ಚಿತ್ರದುರ್ಗ, ವಿಜಯನಗರ, ಹಾವೇರಿ, ಬೆಂಗಳೂರು ಗ್ರಾಮಾಂತರ, ರಾಮನಗರ, ಬೆಂಗಳೂರು ನಗರ, ದಕ್ಷಿಣ ಕನ್ನಡ, ದಾವಣಗೆರೆ, ಕೋಲಾರ ಮತ್ತು ಬಾಗಲಕೋಟೆಗಳಲ್ಲೂ ಕಿಮೋಥೆರಪಿ ಕೇಂದ್ರಗಳು ಆರಂಭಗೊಳ್ಳಲಿವೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ (ಎಸ್‌ಎಎಸ್‌ಟಿ) ನೋಂದಾಯಿತ ತೃತೀಯ ಹಂತದ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಪ್ರಾರಂಭಿಕ ಚಿಕಿತ್ಸೆ ಪಡೆದ ನಂತರದಲ್ಲಿ, ಕಿಮೋಥೆರಪಿ ಚಿಕಿತ್ಸೆಯನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಥಾಪಿಸುವ ‘ಡೇ ಕೇರ್ ಕಿಮೋಥೆರಪಿ ಕೇಂದ್ರ’ಗಳಲ್ಲಿ ಪಡೆಯಬಹುದಾಗಿದೆ. ಚಿಕಿತ್ಸೆಗೆ ಅಗತ್ಯವಿರುವ ಔಷಧವನ್ನೂ ಆ ಆಸ್ಪತ್ರೆಯೇ ಒದಗಿಸಲಿದೆ.

ಪ್ರತಿ ವರ್ಷ ರಾಜ್ಯದಲ್ಲಿ 70 ಸಾವಿರ ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿವೆ. ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಬೆಳಗಾವಿ ಮತ್ತು ಮೈಸೂರು ನಗರಗಳಿಗೆ ಕಿಮೋಥೆರಪಿ ಸೇವೆ ಪಡೆಯಲು ಶೇ. 60ರಷ್ಟು ರೋಗಿಗಳು 100 ಕಿ.ಮೀ.ಗೂ ಹೆಚ್ಚು ದೂರ ಪ್ರಯಾಣಿಸುತ್ತಾರೆ. ಇದರಿಂದಾಗಿ, ದೈಹಿಕವಾಗಿಯೂ ಆರ್ಥಿಕವಾಗಿಯೂ ರೋಗಿಗಳು ತೊಂದರೆಗೊಳಗಾಗುತ್ತಾರೆ. ಈ ತೊಂದರೆಯನ್ನು ತಪ್ಪಿಸಲು ಜಿಲ್ಲಾ ಆಸ್ಪತ್ರೆಗಳಲ್ಲಿ ಡೇ ಕೇರ್ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮುಂದಾಗಿದೆ.

ಪ್ರಸ್ತುತ ಹದಿನಾರು ಜಿಲ್ಲೆಗಳಿಗೆ ಸೀಮಿತವಾಗಿರುವ ಕಿಮೋಥೆರಪಿ ಕೇಂದ್ರಗಳ ಯೋಜನೆ ಮುಂದಿನ ಹಂತದಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಿಗೂ ಅನ್ವಯವಾಗಬೇಕಾಗಿದೆ. ಇದರಿಂದಾಗಿ ಆಯಾ ಭಾಗದ ಕ್ಯಾನ್ಸರ್ ರೋಗಿಗಳು ಕಿಮೋಥೆರಪಿಗಾಗಿ ದೂರ ಪ್ರಯಾಣ ಮಾಡುವುದು ತಪ್ಪುತ್ತದೆ. ಆಸ್ಪತ್ರೆಯ ವೆಚ್ಚವೂ ಗಣನೀಯವಾಗಿ ತಗ್ಗುತ್ತದೆ. ದೂರ ಪ್ರಯಾಣ ಹಾಗೂ ಹೆಚ್ಚಿನ ಹಣದ ಕಾರಣದಿಂದಾಗಿ ಚಿಕಿತ್ಸೆ ಪಡೆಯಲು ಹಿಂಜರಿಯುವ ರೋಗಿಗಳೂ ಇದ್ದಾರೆ. ಅಂಥವರಿಗೆ ಸರ್ಕಾರದ ಯೋಜನೆ ಸಮಾಧಾನ ತರುವಂತಿದೆ.

ಈ ಮೊದಲು ನಗರಪ್ರದೇಶಗಳಲ್ಲಷ್ಟೇ ಲಭ್ಯವಿದ್ದ ಡಯಾಲಿಸಿಸ್ ಚಿಕಿತ್ಸೆ ಪ್ರಸ್ತುತ ತಾಲ್ಲೂಕು ಕೇಂದ್ರಗಳ ಸರ್ಕಾರಿ ಆಸ್ಪತ್ರೆಗಳಲ್ಲೂ ದೊರೆಯುತ್ತಿದೆ. ಇದೀಗ ಕ್ಯಾನ್ಸರ್ ಚಿಕಿತ್ಸೆಯ ಕಿಮೋಥೆರಪಿ ಜಿಲ್ಲಾ ಕೇಂದ್ರಗಳನ್ನು ತಲುಪುತ್ತಿದೆ. ಈ ಮಾದರಿ, ಹೃದ್ರೋಗ, ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಬಂಧಿತ ಚಿಕಿತ್ಸೆಗಳ ವಿಕೇಂದ್ರೀಕರಣದಲ್ಲೂ ಆಗಬೇಕಾಗಿದೆ. ‘ಗ್ಯಾರಂಟಿ’ಗಳ ಕಾರಣದಿಂದಾಗಿ ದೇಶದಲ್ಲಿ ಹೊಸ ರಾಜಕೀಯ ಚಲನೆಗೆ ಕಾರಣವಾಗಿರುವ ಕರ್ನಾಟಕ ಸರ್ಕಾರ ‘ಆರೋಗ್ಯ ಗ್ಯಾರಂಟಿ’ಯನ್ನು ಒದಗಿಸುವ ನಿಟ್ಟಿನಲ್ಲೂ ದಿಟ್ಟ ಹೆಜ್ಜೆಗಳನ್ನಿಡಬೇಕಾಗಿದೆ.

■ ರಘುನಾಥ ಚ.ಹ.